ವಿಷಯ:- ರಾಮನಗರ ಪಟ್ಟಣದಲ್ಲಿ ಇನ್ನೊಂದು ಪೋಲೀಸ್‌ಠಾಣೆ ಪ್ರಾರಂಭ

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ ೧೦:- (೨೭೩)
ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೦ ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ರಾಮನಗರದಲ್ಲಿ ಆದ ಕೋಮು ಗಲಭೆಯ ನಂತರ ಸಮರ್ಥವಾದ ಕಾನೂನು ಪಾಲನೆಗೋಸ್ಕರ ರಾಮನಗರ ಪಟ್ಟಣದ ಐಜೂರು ಬಡಾವಣೆಯಲ್ಲಿ ಹೊಸದಾಗಿ ಒಂದು ಪೋಲೀಸ್ ಠಾಣೆಯನ್ನು ಸ್ಥಾಪಿಸಲು ತಾತ್ಪಿಕವಾಗಿ ಒಪ್ಪಿಗೆ ನೀಡಿದ್ದುದು ನಿಜವೇ?
ಆ) ರಾಮನಗರಕ್ಕೆ ಇನ್ನೊಂದು ಪೋಲೀಸ್ ಠಾಣೆಯ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?
ಇ) ಐಜೂರು ಬಡಾವಣೆಯಲ್ಲಿ ಪೋಲೀಸ್ ಠಾಣೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

ಹೌದು.

ಐಜೂರು ಬಡಾವಣೆಯಲ್ಲಿ ಪೋಲೀಸ್ ಠಾಣೆ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಮಂಜೂರಾತಿ ನೀಡಿ ದಿನಾಂಕ. ೧೫.೨.೯೩ ರಂದು ಸರ್ಕಾರಿ ಆದೇಶ ಹೊರಡಿಸಿದೆ. ಸದ್ಯದಲ್ಲಿ ಠಾಣೆ ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ತ್ರಿವರ್ಣದ ಹೊಸ ಕಾರ್ಡುಗಳ ಹಂಚಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. ೧೧:- (೨೭೪)
ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ)
ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದೆ ಕೊಟ್ಟಿದ್ದ ಹಸಿರು ಮತ್ತು ಕೇಸರಿ ಬಣ್ಣದ ಕಾರ್ಡುಗಳಿಗೆ ಬದಲಾಗಿ ತ್ರಿವರ್ಣದ ಹೊಸ ಕಾರ್ಡುಗಳನ್ನು ಹಂಚಲು ತೀರ್ಮಾನಿಸಿದ್ದು, ಈವರೆವಿಗೆ ಅಂತಹ ಎಷ್ಟು ಕಾರ್ಡುಗಳನ್ನು ಹಂಚಲಾಗಿದೆ.
ಆ) ಹಿಂದೆ ಇದ್ದ ಕಾರ್ಡುಗಳ ಬದಲಾಗಿ ಈಗ ಎಷ್ಟು ಹೆಚ್ಚುವರಿ ಕಾರ್ಡುಗಳನ್ನು ಹಂಚಲಾಗಿದೆ?
ಇ) ಹೆಚ್ಚುವರಿಯಾದ ಕಾರ್ಡುಗಳಿಗೆ ಅಗತ್ಯವಾದಷ್ಟು ಆಹಾರ ಪದಾರ್ಥ ಮತ್ತು ಸೀಮೆಎಣ್ಣೆ ನೀಡಲಾಗುತ್ತಿದೆಯೇ?

ಶ್ರೀಮತಿ ಮನೋರಮ ಮಧ್ವರಾಜ್
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

೨೭,೨೧,೨೪೩ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

ಸುಮಾರು ೧೭ ಲಕ್ಷ ತ್ರಿವರ್ಣ ಪಡಿತರ ಚೀಟಿಗಳನ್ನು ಹೆಚ್ಚುವರಿಯಾಗಿ ಹಂಚಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಕೇಂದ್ರ ಸರ್ಕಾರವು ರಾಜ್ಯಕ್ಕೆ ಹಂಚಿಕೆ ಮಾಡಿರುವ ಪ್ರಮಾಣವನ್ನು ಅನುಸರಿಸಿ ಆಹಾರ ಧಾನ್ಯ ಮತ್ತು ಸೀಮೆಎಣ್ಣೆಯನ್ನು ಪಡಿತರ ಚೀಟಿಗಳಿಗೆ ನೀಡಲಾಗುತ್ತಿದೆ.

ವಿಷಯ:- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೩:- (೨೭೬)
ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ)
ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಾಲಿ ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ ಎಷ್ಟು?
ಆ) ಅದರಲ್ಲಿ ಯಾವ ಯಾವ ವರ್ಗದ ಕಲಾವಿದರು ಇರುವರು?
ಇ) ೧೯೯೧-೯೨, ೧೯೯೨-೯೩ನೇ ಸಾಲಿನಲ್ಲಿ ಎಷ್ಟು ಜನ ಕಲಾವಿದರಿಗೆ ಹೊಸದಾಗಿ ಮಾಸಾಶನವನ್ನು ಮಂಜೂರು ಮಾಡಲಾಗಿದೆ?
(ಹೆಸರು ಸಹಿತ ವಿವರ ನೀಡುವುದು)
ಈ) ೧೯೯೩-೯೪ನೇ ಸಾಲಿನಲ್ಲಿ ಎಷ್ಟು ಜನ ಕಲಾವಿದರಿಗೆ ಮಾಸಾಶನ ಕೊಡುವ ಗುರಿಯನ್ನಿಟ್ಟುಕೊಳ್ಳಲಾಗಿದೆ?

ಶ್ರೀ ಹೆಚ್. ವಿಶ್ವನಾಥ್
(ಕನ್ನಡ ಮತ್ತು ಸಂಸ್ಕೃತಿ ಸಚಿವರು)

೬೭೭೧

ಸಂಗೀತ, ನೃತ್ಯ, ನಾಟಕ, ಹರಿಕಥೆ, ಲಲಿತಕಲೆ, ಸಾಹಿತ್ಯ, ಸಂಸ್ಕೃತ, ಜಾನಪದ, ಯಕ್ಷಗಾನ, ಗಮಕ, ಸಮಾಜಸೇವೆ, ಚಲನಚಿತ್ರ.

-ಇಲ್ಲ-

ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಹುಬ್ಬಳ್ಳಿ ನಗರದಲ್ಲಿ ನೂತನ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಆರಂಭ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೪:- (೨೭೭)
ಶ್ರೀ ಪಿ.ಸಿ. ಸಿದ್ಧನಗೌಡರ್ (ಕಲಘಟಗಿ)
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಈ ಹಿಂದೆ ನೂತನ ಬಸ್ ಸ್ಟ್ಯಾಂಡ್ ಕಟ್ಟಲು ಅಡಿಗಲ್ಲು ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?
ಆ) ಹಾಗಿದ್ದಲ್ಲಿ, ನೂತನ ಬಸ್‌ಸ್ಟ್ಯಾಂಡ್ ಕಟ್ಟಲು ಬೇರೊಂದು ಜಾಗದಲ್ಲಿ ಸ್ಥಳವನ್ನು ಕಾಯ್ದಿರಿಸಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?
ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು?
ಈ) ಹುಬ್ಬಳ್ಳಿಯಲ್ಲಿ ಹೊಸದಾಗಿ ಬಸ್‌ಸ್ಟ್ಯಾಂಡ್ ನಿರ್ಮಿಸಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?
ಉ) ಇದ್ದಲ್ಲಿ ಅದನ್ನು ಯಾವಾಗ ಕಟ್ಟಲು ಪ್ರಾರಂಭಿಸಲಾಗುವುದು?
ಊ) ಬಸ್‌ಸ್ಟ್ಯಾಂಡ್ ನಿರ್ಮಿಸಲು ಖರ್ಚು ಮಾಡುವ ಹಣವೆಷ್ಟು ಹಾಗೂ ಆ ಹಣವು ಮಂಜೂರಾಗಿದೆಯೇ?